ಸಂಚಿಕೆ ೦೧ @markonahalli.rawep @markonahalli rawe

# ಕೃಷಿ ಕಲರವ

**ಕೃಷಿ ಕಾರ್ಯಾನುಭವದ ಕಥೆ ,
ರೈತರ ಜೊತೆ!**

## ಮಾರ್ಕೋನಹಳ್ಳಿ

## ಮುನ್ನುಡಿ:

ಪ್ರಿಯ ಮಿತ್ರರೇ, RAWE-P ಪರಿವಿಡಿಯು; ಈಗಾಗಲೇ ಪ್ರಾಯೋಗಿಕ ಜ್ಞಾನ ಪಡೆಯಲು ಹೊರಡಿರುವಂತಹ ವಿದ್ಯಾರ್ಥಿ-ವಿದ್ಯಾರ್ಥಿನಿಯರ ನಾವಿನ್ಯ ಕಲ್ಪನೆಗಳ ಅಳವಡಿಕೆ ಹಾಗೂ ಗ್ರಾಮೀಣ ಭಾಗ ಕೃಷಿ ಕ್ಷೇತ್ರದ ವ್ಯವಹಾರ ಕೌಶಲ ಮೈಗೂಡಿಸಿಕೊಳ್ಳಲು ಅತ್ಯುತ್ತಮ ಜಗಲಿಯಾಗಿರುತದೆ. ಈ ಪರಿವಿಡಿಯ ಜೊತೆ-ಜೊತೆಗೆ "ಕೃಷಿ ಕಲರವ" ಸಂಚಿಕೆ ತರುವುದು ವಿದ್ಯಾರ್ಥಿಗಳಲ್ಲಿ ಸವಿಸ್ತಾರವಾಗಿ ಮಾಹಿತಿ ಕಲೆಹಾಕುವಿಕೆ, ಸ್ವಯಂ ಸೇವೆ ಗುಂಪು ಚರ್ಚೆಯ ಕೌಶಲ್ಯವನ್ನು ಹೆಚ್ಚಿಸಲು ತುಂಬಾ ಸಹಕರಿಯಾಗಿರುತ್ತದೆ.
ಈ ನಮ್ಮ ಪ್ರೀತಿಯ ವಿದ್ಯಾರ್ಥಿಗಳ ಪ್ರಯತ್ನ ಯಾವುದೇ ಅಡಚಣೆ ಇಲ್ಲದೆ ಸುಲಭವಾಗಿ ಸಾಗಲೆಂದು ಪ್ರಾರ್ಥಿಸುತ್ತೇನೆ.



- ಡಾ.ವೈ.ಎನ್.ಶಿವಲಿಂಗಯ್ಯ
ಪ್ರಾಧ್ಯಾಪಕರು & ಮುಖ್ಯಸ್ಥರು
ಕೃಷಿ ವಿಸ್ತರಣಾ ವಿಭಾಗ

RAWE-P ಪರಿವಿಡಿಯ ಹಲವು ಚಟುವಟಿಕೆಗಳನ್ನು "ಕೃಷಿ ಕಲರವ" ಸಂಚಿಕೆಯ ಮಾರ್ಗದಲ್ಲಿ ಹೊರ ತರುವುದು ಹಾಗೂ ಪ್ರಾಯೋಗಿಕ ಕೌಶಲ್ಯಗಳ ಅನುಭವ ಹೆಚ್ಚಿಸುವಲ್ಲಿ ಉಪಯೋಗವಾಗಿದೆ. ವಿದ್ಯಾರ್ಥಿಗಳ ಈ ನಡೆಯ ಮಾರ್ಗಕ್ಕೆ ಶುಭವಾಗಲಿ.



ಡಾ.ವೈ.ಎಮ್.ಗೋಪಾಲ್
ಸಹಾಯಕ ಪ್ರಾಧ್ಯಾಪಕರು
Teacher in-charge
(ಮಾರ್ಕೋನಹಳ್ಳಿ)

## ಕೃಷಿ ಗ್ರಾಮೀಣ ಕಾರ್ಯಾನುಭವ ಕಾರ್ಯಕ್ರಮ:

- ಕೃಷಿಗೆ ಸಂಬಂಧಿಸಿದಂತೆ ಗ್ರಾಮೀಣ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳಲು ವಿದ್ಯಾರ್ಥಿಗಳಿಗೆ ಅವಕಾಶವನ್ನು ಒದಗಿಸುವುದು ಮತ್ತು ಸಂಬಂಧಿತ ಚಟುವಟಿಕೆಗಳು.
- ರೈತರ ಸಾಮಾಜಿಕ-ಆರ್ಥಿಕ ಪರಿಸ್ಥಿತಿಗಳು ಮತ್ತು ಅವರ ಸಮಸ್ಯೆಗಳ ಬಗ್ಗೆ ವಿದ್ಯಾರ್ಥಿಗಳಿಗೆ ಪರಿಚಯವಾಗುವಂತೆ ಮಾಡುವುದು.
- ನೈಜ ಕ್ಷೇತ್ರದ ಸನ್ನಿವೇಶಗಳಿಗೆ ಸಂಬಂಧಿಸಿದ ವಿದ್ಯಾರ್ಥಿಗಳಿಗೆ ರೋಗನಿರ್ಣಯ ಮತ್ತು ಪರಿಹಾರ ಜ್ಞಾನವನ್ನು ನೀಡಲು ಪ್ರಾಯೋಗಿಕ ತರಬೇತಿ.
- ಇತ್ತೀಚಿನ ವಿಸ್ತರಣೆಯನ್ನು ಬಳಸಿಕೊಂಡು ರೈತರೊಂದಿಗೆ ವಿದ್ಯಾರ್ಥಿಗಳ ಪರಿಣಾಮಕಾರಿ ಸಂವಹನ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಲು ತಂತ್ರಜ್ಞಾನದ ವರ್ಗಾವಣೆಯ ವಿಧಾನಗಳು.
- ಸಂಕೀರ್ಣ ಕೃಷಿ ಸಮಸ್ಯೆಗಳನ್ನು ಪರಿಹರಿಸಲು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮತ್ತು ಸಾಮರ್ಥ್ಯವನ್ನು ಬೆಳೆಸುವುದು.
- ಚಾಲ್ತಿಯಲ್ಲಿರುವ ವಿಸ್ತರಣೆ ಮತ್ತು ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮದ ಬಗ್ಗೆ ವಿದ್ಯಾರ್ಥಿಗಳಿಗೆ ಪರಿಚಯ ಮಾಡಿಕೊಡುವುದು.

ದಿ:12/08/2022

## ಸ್ವಚ್ಛವಾಗಿರಿಸೋಣ ಸುತ್ತಲಿನ ಜಗವ;
## ಏಳಿಗೆಗಾಗಿ ಸಹಬಾಳ್ವೆಯಿಂದ ಒಂದಾಗಿ ನಡೆವ.



- ಸುಮಾರು 10:45 ಕ್ಕೆ ಜಿಕೆವಿಕೆಯನ್ನು ಹೊರಟು 1:40ಕ್ಕೆ ನಿಗದಿಪಡಿಸಿದ ಮಾರ್ಕೋನಹಳ್ಳಿಗೆ ಬಂದು ತಲುಪಿದೆವು. ಗ್ರಾಮದ ಮುಖಂಡರನ್ನು ಬೇಟಿಯಾಗಿ ವಾಸವಿರಲು ಸ್ಥಳವನ್ನು ಹುಡುಕಿಕೊಂಡೆವು.



ದಿ:13/08/2022

## ತಿಳಿಯೋಣ ಊರ ಬಗೆ! ಬೆರೆಯೋಣ ರೈತರ ಜೊತೆಗೆ!



•ಕಿರಿಯ-ಹಿರಿಯ ಪುಟಾಣಿಗಳ ಕ್ರಿಯಾಶೀಲತೆ ಹಾಗೂ ಕೌಶಲ್ಯತೆಯ ಕುರಿತು ಮುಖ್ಯೋಪಾಧ್ಯಾಯರೊಂದಿಗೆ ಚರ್ಚೆ ಮತ್ತು ರೈತರೊಡನೆ 'ಯುವಕೃಷಿಕರ' ಕಿರು ಪರಿಚಯ ಹಾಗು ಅಪರಿಚಿತ ಗೆಳೆಯರ ಬೇಟಿ ಜೊತೆಯಾದೆವು ಮುಗುಳ್ನಗೆಯ ಬೀರಿ.

ದಿ:14/08/2022

## ಸ್ವಚ್ಛ ಗ್ರಾಮ, ಪ್ರಗತಿಗೆ ಪ್ರಥಮ!







- ಗ್ರಾಮದ ಶಾಲಾ ಹಾಗೂ ದೇವಾಲಯದ ಆವರಣದಲ್ಲಿ ಸ್ವಚ್ಛತೆಯ ಕಾರ್ಯವನ್ನು ನೆರವೇರಿಸಿದೆವು.
- ಶುಚಿತ್ವವೇ ದೈವತ್ವ ಎನ್ನುವ ನುಡಿಯನ್ನು ಹಿಂಬಾಲಿಸೋಣ,ಎಲ್ಲರೂ ಒಗ್ಗೂಡಿ ಸ್ವಚತೆಯ ಜಾಗೃತಿಯನ್ನು ಬೆಳೆಸೋಣ.

ದಿ:15/08/2022

## ಸಂಭ್ರಮದ ಅಮೃತ ಮಹೋತ್ಸವ, ಜೊತೆಯಾಗಿ ಕೃಷಿ ಯಾತ್ರೆ ನಡೆಸುವ







- ಮಕ್ಕಳಿಗೆ ವೇಷಭೂಷಣ, ರಸಪ್ರಶ್ನೆ ಕಾರ್ಯಕ್ರಮ ಹಮ್ಮಿಕೊಂಡೆವು. ಕೃಷಿ ಕಾರ್ಯಾನುಭವದ ಉದ್ದೇಶದ ಕುರಿತು ಜನರಲ್ಲಿ ಅರಿವು ಮೂಡಿಸಲು ಗ್ರಾಮದ ಪ್ರತಿ ಬೀದಿಯಲ್ಲೂ ಜಾಥಾ ನಡೆಸಿದೆವು.

ದಿ:16/08/2022

## ಕೆಲಸ ಕೀಳಲ್ಲ, ಸತ್ತೆ ತೆಗೆಯುವ ನಾವೆಲ್ಲ





- ಮುಂಜಾನೆ ನಿಗದಿತ ಹೊಲದಲ್ಲಿನ ಸತ್ತೆ ಆಯ್ದೆವು,

ನಂತರ ಸ್ಥಳೀಯ ತಾಂತ್ರಿಕ ಜ್ಯಾನದೊಳಗೊಂದಾದ ಪಂಚಗವ್ಯದ ಕುರಿತು ಚಾರ್ಟ್ ತಯಾರಿಸಿದೆವು ಹಾಗು ಬೀಜಾಮೃತದ ಬಗ್ಗೆ ಚಾರ್ಟ್ ತಯಾರಿಸಿದವು

ದಿ:17/08/2022

## ರೈತ ಕುಟುಂಬದ ನಿರ್ದಿಷ್ಟ ಮಾಹಿತಿ ಸಂಗ್ರಹಣೆ



- ರೈತರ ಸಂಪೂರ್ಣ ಮಾಹಿತಿ, ತಿಳಿಸುವುದು ಜೀವನದ ಸ್ಥಿತಿ- ಗತಿಯ ಸಂಗತಿ.



- ರೈತರ ಆರ್ಥಿಕ ಸ್ಥಿತಿ ಗತಿಯ ಬಗ್ಗೆ ,ಹಿಂದಿನ ವರ್ಷದ ಬೆಳೆಗಳ ಮಾಹಿತಿಯನ್ನು ಕಲೆಹಾಕಿದೆವು. ಇದರಿಂದ ರೈತರ ಬೆಳವಣಿಗೆ, ದುರ್ಬಲತೆಯ ಬಗ್ಗೆ ತಿಳಿಯಲು ಅನುಕೂಲವಾಯಿತು.

ದಿ:18/08/2022

# ರೈತರ ಕೃಷಿ ಕ್ಷೇತ್ರ ಬೇಟಿ



- ರೈತ ಬಾಂಧವ್ಯ ಬೆಳೆಗಳ ಪ್ರಾಯೋಗಿಕ ಜ್ಞಾನದ ಅಳವಡಿಕೆ ಹಾಗು ಕಂಡುಬಂದಂತಹ ಸಮಸ್ಯೆಗಳ ನಿವಾರಿಸುವ ಕ್ರಮಗಳ ಸಮಾಗಮ.

- ರೈತರು ಅಳವಾಡಿಸುತ್ತಿರುವ ಸಾಂಪ್ರದಾಯಿಕ ಪದ್ಧತಿಗಳು,ಅವರು ಗುರುತಿಸಲ್ಪಟ್ಟ ರೋಗಗಳು, ಕೀಟಗಳ ಬಗ್ಗೆ ಮಾಹಿತಿ ನೀಡಿದರು.

